ಕರ್ಕಿ ಕೃಷ್ಣಮೂರ್ತಿ

# ಕಡಲ ನಡುವಣ ಹಡಗು

"ಛೇ... ಹೀಗಾಗುತ್ತೆ ಅಂತಾ ಮೊದಲೇ ಗೊತ್ತಿದ್ದರೆ ಮದುವೆಯೇ ಆಗುತ್ತಿರಲಿಲ್ಲ" ಎಂದುಕೊಂಡ ಚಂದ್ರಕಾಂತ.

ಓಮಾನ್ ದೇಶದ ರಾಜಧಾನಿ ಮಸ್ಕತ್ತಿನಲ್ಲಿ ಕೆಲಸ ಮಾಡುತ್ತಿದ್ದ ಆತ ಈ ಬಾರಿ ಊರಿಗೆ ಹೋದಾಗ ಮದುವೆಯಾಗಿದ್ದ. ಫಾರಿನ್ನಿನಲ್ಲಿದ್ದೇನೆ ಎನ್ನುವ ಪೊಗರಿನಲ್ಲಿ ಮದುವೆಯಾಗಿ, ಇರುವ ಸೀಮಿತ ರಜೆಯ ಅವಧಿಯಲ್ಲೇ ಶಾರ್ಟ್ ಹನಿಮೂನ್ ಮುಗಿಸಿ, ವೀಸಾ ಪ್ರಕ್ರಿಯೆಗಳೆಲ್ಲ ಮುಗಿದ ಕೂಡಲೇ ಹೆಂಡತಿ ಚೇತನಾಳನ್ನು ಮಸ್ಕತ್ತಿಗೆ ಕರೆಸಿಕೊಳ್ಳುತ್ತೇನೆ ಎಂದು ಹೇಳಿ ವಾಪಸ್ಸಾಗಿದ್ದ. ಆದರೆ ಇಲ್ಲಿ ಬೇರೆಯದೇ ಕಾದಿತ್ತು ಆತನಿಗೆ. ರಾಜಧಾನಿಯಿಂದ ಸಾವಿರಾರು ಕಿಲೋಮೀಟರು ದೂರವಿರುವ ಕಸಬಾ ಎಂಬ ಪುಟ್ಟ ಊರಿಗೆ ಚಂದ್ರಕಾಂತನನ್ನು ವರ್ಗಾವಣೆ ಮಾಡಿತ್ತು ಅವನ ಕಂಪನಿ. ಸಾಮಾಮು ಸರಂಜಾಮುಗಳನ್ನೆಲ್ಲ ಪ್ಯಾಕ್ ಮಾಡಿಕೊಳ್ಳಲು ಒಂದು ವಾರದ ಅವಕಾಶ ಕೊಟ್ಟು, ನಂತರ ಕೂಡಲೇ ಕಸಬಾಕ್ಕೆ ರಿಪೋರ್ಟ್ ಮಾಡಿಕೊಳ್ಳಲು ಸೂಚಿಸಿತ್ತು.

ಚಂದ್ರಕಾಂತ ಬಂದರು ನಿರ್ಮಾಣ ಕಾಮಗಾರಿಯ ಸ್ಪೆಶಲಿಸ್ಟ್. ಕೆಲಸದಲ್ಲಿ ನಿಪುಣ ಹಾಗೂ ಆಫೀಸಿನಲ್ಲಿ ಒಳ್ಳೆಯ ಹೆಸರು ಕೂಡ ಪಡೆದಿದ್ದ. ಆತನ ಕಂಪನಿ ಕಸಬಾದಲ್ಲಿ ಬಂದರು ನಿರ್ಮಾಣವೊಂದರ ದೊಡ್ಡ ಕಾಂಟ್ರಾಕ್ಟನ್ನು ಪಡೆದಿತ್ತು. ಅಲ್ಲಿ ಚಂದ್ರಕಾಂತನ ಅಗತ್ಯದ ತುರ್ತಿತ್ತು. ಈತನಿಗೆ ಕಂಪನಿಯ ಆದೇಶ ಪಾಲಿಸದೇ ವಿಧಿಯಿರಲಿಲ್ಲ. ಹಾಗಂತ, ಹೆಂಡತಿಯನ್ನು ಕಸಬಾಕ್ಕೆ ಕರೆಸಿಕೊಳ್ಳಲು ಆತನಿಗೆ ತೊಂದರೆಯೇನೂ ಇರಲಿಲ್ಲ. ಆದಷ್ಟು ಶೀಘ್ರ ವೀಸಾ ಮಾಡಿಸಿ ಕೊಡುವ ಭರವಸೆಯನ್ನು ಕಂಪನಿಯವರೇ ನೀಡಿದ್ದರು. ಆದರೆ ಚಂದ್ರಕಾಂತನ ಸಮಸ್ಯೆ ಬೇರೆಯದೇ ಆಗಿತ್ತು. ಮಸ್ಕತ್ತಿನಲ್ಲಿದ್ದೇನೆಂದು ಹೇಳಿ ಮದುವೆಯಾಗಿ ಹೆಂಡತಿಯನ್ನು ಯಾವುದೋ ಮೂಲೆಯಲ್ಲಿಯ ಹಳ್ಳಿಗೆ ಕರೆತರುವುದು ಹೇಗೆಂಬುದು ಅವನಿಗೆ ತೋಚಲಿಲ್ಲ. ಮಸ್ಕತ್ತಿನ ವೈಭವೋಪೇತ ಜೀವನವನ್ನು ಬಿಟ್ಟು ಕಸಬಾಕ್ಕೆ ಹೋಗುವುದು ಆತನಿಗೇ ಸುತಾರಾಂ ಇಷ್ಟವಿರಲಿಲ್ಲ. ಅದರಲ್ಲೂ ಹೆಂಡತಿಯನ್ನೂ ಅಲ್ಲಿ ಇರಮಾಡುವುದೆಂದರೆ! ಆಕೆಯೂ ಸೇರಿ ಮಾವನ ಮನೆಯವರೆಲ್ಲ 'ಈತ ಮೊದಲಿಂದ